ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ
ಐವಾನ್-ಎ-ಶಾಹಿ-ಬಡಾವಣೆ ಕಲಬುರಗಿ

ಸಂಖ್ಯೆ:ಸಿ2(1)/ಆಡಳಿತ/ಮು.ಶಿ/ಸಾ.ವರ್ಗ/04/2024-25 ದಿನಾಂಕ: 10/07/2024

ಜ್ಞಾಪನ

ವಿಷಯ: 2023-24ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗೆ ಸಂಬಂಧಿಸಿದಂತೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆ ಅರ್ಜಿ ಸಲ್ಲಿಸಿರುವ ಅರ್ಹರಾದ ಗ್ರೂಪ್-'ಬಿ' ಮುಖ್ಯ ಶಿಕ್ಷಕರು ತತ್ಸಮಾನ ವೃಂದದ ಅಧಿಕಾರಿಗಳ ತಾತ್ಕಾಲಿಕ ಕೌನ್ಸಿಲಿಂಗ ಆದ್ಯತಾ ಪಟ್ಟಿ ಹಾಗೂ ನಿರ್ದಿಷ್ಟ ಪಡಿಸಿದ ಹುದ್ದೆಯ ಪಟ್ಟಿ ಪ್ರಕಟಿಸಿದ ಕುರಿತು.

ಉಲ್ಲೇಖ: 1) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಸಿ3(07) ಪ್ರಾ.ಪ್ರೌ.ಶಾ ಶಿ. ಸಾಮಾನ್ಯ ವರ್ಗಾವಣೆ/01/2023-24 ದಿನಾಂಕ: 15/03/2024 ಮತ್ತು 16/04/2024.

2) ವರ್ಗಾವಣೆ ತಂತ್ರಾಂಶದ ಮೂಲಕ ದಿನಾಂಕ: 10/07/2024ರಂದು ನೀಡಲಾದ ತಾತ್ಕಾಲಿಕ ಆದ್ಯತಾ ಪಟ್ಟಿ.

*******

ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗೆ ಉಲ್ಲೇಖ (1) ರನ್ವಯ ಮಾರ್ಗಸೂಚಿ ಹೊರಡಿಸಿ ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿಯನ್ನು ಜಾರಿಗೊಳಿಸಲಾಗಿದೆ.

ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿಯನ್ವಯ ಸಾಮಾನ್ಯ ವರ್ಗಾವಣೆಗೆ ಸಂಬಂಧಿಸಿದಂತೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಅರ್ಹರಾದ ತಾತ್ಕಾಲಿಕ ಕೌನ್ಸಿಲಿಂಗ ಆದ್ಯತಾ ಪಟ್ಟಿಯನ್ನು ಹಾಗೂ ನಿರ್ದಿಷ್ಟ ಪಡಿಸಿದ ಹುದ್ದೆಗಳಲ್ಲಿ ಗರಿಷ್ಠ ಸೇವಾವಧಿ 5 ವರ್ಷ ಪೂರ್ಣಗೊಳಿಸಿದ ಅಧಿಕಾರಿಗಳ ಪಟ್ಟಿಯನ್ನು ಈ ಕೆಳಕಂಡಂತೆ ಇಲಾಖಾ ವೆಬ್-ಸೈಟ್ https:// cpikalaburgi.karnataka.gov.in/ ನಲ್ಲಿ ಹಾಗೂ ವಿಭಾಗದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ರವರ ಕಛೇರಿಯಲ್ಲಿ ಪ್ರಕಟಿಸಿದೆ. ಸದರಿ ಪಟ್ಟಿಗೆ ಬಾಧಿತರಿಂದ ಏನಾದರು ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 12/07/2024ರ ವರೆಗೆ ಪೂರಕ ದಾಖಲೆಗಳೊಂದಿಗೆ ವಿಭಾಗೀಯ ಸಹ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ರವರಲ್ಲಿ ಸಲ್ಲಿಸತಕ್ಕದ್ದು.

**ಅಡಕಗಳು:**

1) ವಿಭಾಗದ ಒಳಗೆ ಕೋರಿಕೆವರ್ಗಾವಣೆಗೆ ಅರ್ಜಿ ಸಲ್ಲಿಸಿದ ಅರ್ಹರಾದ ಅಧಿಕಾರಿಗಳ ಪಟ್ಟಿ- **ಅನುಬಂಧ-1**
2) ವಿಭಾಗದ ಹೊರಗೆ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದ ಅರ್ಹರಾದ ಅಧಿಕಾರಿಗಳ ಪಟ್ಟಿ- **ಅನುಬಂಧ-2**
3) ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಗರಿಷ್ಠ ಸೇವಾವಧಿ 5 ವರ್ಷ ಪೂರ್ಣಗೊಳಿಸಿದ ಅಧಿಕಾರಿಗಳ ಪಟ್ಟಿ- **ಅನುಬಂಧ-3**

ನಿರ್ದೇಶಕರು
ಹಾಗೂ ವರ್ಗಾವಣಾ ಪ್ರಾಧಿಕಾರಿಗಳು
ಅಪರ ಆಯುಕ್ತರ ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳು:

1) ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರಿಗೆ.
2) ಶ್ರೀಮತಿ ಶೃತಿ, ವಿಭಾಗದ ಪ್ರೋಗ್ರಾಮರ್, ಇ-ಗವರ್ನನ್ಸ್ ಇವರಿಗೆ ನೀಡುತ್ತ, ಸದರಿ ಪಟ್ಟಿಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವಂತೆ ತಿಳಿಸಿದೆ.
3) ಕಛೇರಿ ಪ್ರತಿ.